




ಶಾರುಖ್ ಖಾನ್, ದೀಪಿಕಾ ನಟನೆಯ 'ಪಠಾಣ್' 2023ರ ಮೊದಲ ಭಾಗದ ಹೊಳಪು




ಗೆಲುವಿನ ದಾರಿಯಲ್ಲಿ 'ಆದಿಪುರುಷ್' ಸಮಾಧಾನಕಾರ ನಡಿಗೆ



ದಾಸ್ ಕಾ ಧಮ್ಕಿ

ಚೇತೋಹಾರಿಯಾಗಿ ಇರಲಿದೆ ಎನ್ನುವ ಆಶಾವಾದವಿದೆ. 'ಕ್ಯಾರಿ ಆನ್ ಜಟ್ಟ 3' ಎಂಬ ಪಂಜಾಬಿ ಸಿನಿಮಾದ ಯಶಸ್ಸನ್ನು ಇದಕ್ಕೆ ಉದಾಹರಣೆಯಾಗಿ ಕೆಲವರು ನೀಡುತ್ತಿದ್ದಾರೆ.

ಶಾರುಖ್ ಅಭಿನಯದ 'ಜವಾನ್', ಪ್ರಭಾಸ್ ನಟನೆಯ 'ಸಲಾರ್', ಸಲ್ಮಾನ್ ಖಾನ್ ನಾಯಕರಾಗಿ ಇರುವ 'ಟೈಗರ್ 3' ಈ ಮೂರೂ ಸಿನಿಮಾಗಳು ಇದೇ ವರ್ಷ ತೆರೆಕಾಣಲಿರುವುದರಿಂದ ಮುಂದಿನ ದಿನಗಳು ಶುಭದಿನಗಳಾಗಲಿವೆ ಎನ್ನುವ ನಿರೀಕ್ಷೆ ಇದೆ. ಯಶಸ್ಸಿನ ಅಲೆಯ ಮೇಲೆ ಶಾರುಖ್ ಇರುವುದರಿಂದ ಹಾಗೂ 'ಜವಾನ್' ಸಿನಿಮಾ ಟೀಸರ್‌ಗೆ ವ್ಯಕ್ತವಾಗಿರುವ ಮೆಚ್ಚುಗೆಗಳಿಂದಾಗಿ ಈಗಾಗಲೇ ಆಶಾವಾದಕ್ಕೆ ರೆಕ್ಕೆಪುಕ್ಕ ಮೂಡಿದೆ. ಸೋಲುಗಳಿಂದ ಕಂಗೆಟ್ಟಿದ್ದರೂ ಪ್ರಭಾಸ್ ಮಾರುಕಟ್ಟೆ ದೊಡ್ಡದು. ನಿರ್ದೇಶಕ ಪ್ರಶಾಂತ್ ನೀಲ್ ಹೊಸಕಾಲದ ಪ್ರೇಕ್ಷಕರ ಮನ ಗೆಲ್ಲುವ ತಂತ್ರಗಾರ. ಈ ಅಂಶಗಳು ಕ್ಲಿಕ್ ಆದಲ್ಲಿ 'ಸಲಾರ್' ಕೂಡ ಮೋಡಿ ಮಾಡಲಿದೆ ಎನ್ನುವುದು ಅಂದಾಜು. ಸಲ್ಮಾನ್ ಖಾನ್ ಈ ಹಿಂದೆ 'ಟೈಗರ್' ಪದವನ್ನು ಒಳಗೊಂಡ ಶೀರ್ಷಿಕೆಯ ಸಿನಿಮಾಗಳಲ್ಲಿ ಶುಭವನ್ನೇ ಕಂಡವರು. ಹೀಗಾಗಿ ಈ ಸಿನಿಮಾ ಮೇಲೆ ಅವರಿಗೂ ಭರಪೂರ ವಿಶ್ವಾಸವಿದೆ. ಕನ್ನಡದಲ್ಲೂ 'ಸಪ್ತ ಸಾಗರದಾಚೆ ಎಲ್ಲೋ', 'ಟೋಬಿ', 'ಬ್ಯಾಡ್ ಮ್ಯಾನರ್ಸ್', 'ಘೋಸ್ಟ್' ಚಿತ್ರಗಳ ಮೇಲೆ ನಿರೀಕ್ಷೆ ಇದೆ. ರಕ್ಷಿತ್ ಶೆಟ್ಟಿ ಅಭಿನಯ, ಹೇಮಂತ್ ರಾವ್ ನಿರ್ದೇಶನದ 'ಸಪ್ತ ಸಾಗರದಾಚೆ ಎಲ್ಲೋ' ಇದೇ ವರ್ಷ 'ಸೈಡ್ ಎ', 'ಸೈಡ್ ಬಿ' ಎಂದು ಎರಡು ಭಾಗಗಳಲ್ಲಿ ಬಿಡುಗಡೆಯಾಗಲಿರುವುದು ವಿಶೇಷ. ಎರಡು ತಿಂಗಳ ಅಂತರದಲ್ಲಿ ಒಂದೇ ಸಿನಿಮಾದ ಎರಡು ಭಾಗಗಳು ತೆರೆಕಂಡ ಉದಾಹರಣೆ ಇದುವರೆಗೆ ಇಲ್ಲ. ಕನ್ನಡ ಚಿತ್ರರಂಗವು ಕಥೆಗಾರರನ್ನು ಸರಿಯಾಗಿ ನಡೆಸಿಕೊಂಡಿಲ್ಲ ಎಂದು ಖುಲ್ಲಂಖುಲ್ಲಾ ಹೇಳಿರುವ ರಾಜ್ ಬಿ. ಶೆಟ್ಟಿ ಕೂಡ 'ಟೋಬಿ' ಮೊದಲ ಪೋಸ್ಟರ್ ಮೂಲಕವೇ ಸಂಚಲನ ಮೂಡಿಸಿದ್ದಾರೆ. 'ಘೋಸ್ಟ್' ಸಿನಿಮಾದ ಟೀಸರ್‌ನಲ್ಲಿನ 'ಒರಿಜಿನಲ್ ಗ್ಯಾಂಗ್‌ಸ್ಟರ್' ಎಂಬ ಶಿವರಾಜ್‌ಕುಮಾರ್ ಸಂಭಾಷಣೆಗೂ ಚಪ್ಪಾಳೆ ಬೀಳುತ್ತಿದೆ.

ತೆಲುಗಿನ 'ಬಲಗಂ', 'ದಾಸ್ ಕಾ ಧಮ್ಕಿ', 'ವಿರೂಪಾಕ್ಷ', ತಮಿಳಿನ 'ಪೊನ್ನಿಯಿನ್ ಸೆಲ್ವನ್ 2', 'ಪಾತು ತಲ', 'ಪಿಚ್ಚೈಕಾರನ್ 2', ಮಲೆಯಾಳಂನ '2018', 'ರೋಮಾಂಚನಂ', 'ಪಾಚುಂ ಅದ್ಭುತವೆಳಕಂ', 'ಇರಟ್ಟ' ಸಿನಿಮಾಗಳು ಗಳಿಕೆವಾರು ಯಶಸ್ಸು ದಾಖಲಿಸಿವೆ. ವಿಜಯ್ ಅಭಿನಯದ 'ವಾರಿಸು' ತೆಲುಗಿನಲ್ಲಿ ರೀಮೇಕ್ ಆಗಿ, ಅಲ್ಲಿಯೂ ಉತ್ತಮ ಗಳಿಕೆ ಮಾಡಿದೆ. 'ಪಠಾಣ್' ಕೂಡ ತೆಲುಗು, ತಮಿಳು ಡಬ್ಡ್ ಆವೃತ್ತಿಗಳಲ್ಲೂ ಗಮನಾರ್ಹ ರೀತಿಯಲ್ಲಿ ವಹಿವಾಟು ನಡೆಸಿದೆ.

'ಇನ್ನು ಮುಂದೆ ನೋಡ್ತಾ ಇರಿ' ಎನ್ನುವಂತೆ ಶಾರುಖ್ ಖಾನ್ ಬೀರಿರುವ ನೋಟವು ವರ್ಷದ ಇನ್ನುಳಿದ ಅರ್ಧಭಾಗದ ಕುರಿತ ಆಶಾವಾದಕ್ಕೆ ಅರ್ಥವನ್ನಂತೂ ದಕ್ಕಿಸಿಕೊಟ್ಟಿದೆ.